# ನಾಣ್ಯ

ಅತ್ತೆ ಕಾಫಿ ಲೋಟ ಹಿಡಿದುಕೊಂಡು ಬಂದಿದ್ದರು.

ತಡೀರಿ, ಮೊದ್ಲು ಕೈಕಾಲು ತೊಳ್ಕಂಬರ್ತೀನಿ.. ಕೈಕಾಲು ತೊಳೆದು ಸೀದಾ ಮುಂಚೇಕಡೆಗೆ ಬಂದು ಕೂರಲಿಲ್ಲ ರಾಮಚಂದ್ರ. ನಾಗಶ್ರೀಯ ಕೋಣೆ ಹೊಕ್ಕಿದ್ದ. ಬಾಣಂತನ ಅಂದರೆ ನಾಗಶ್ರೀಯ ಬಿಡಾರ ಕೆಳಗಿನ ಕೋಣೆಗೆ ಸ್ಥಳಾಂತರವಾಗುತ್ತದೆ ಎಂಬುದು ಅವನಿಗೆ ಗೊತ್ತಿಲ್ಲದ್ದಲ್ಲ. ಮಸುಕು ಕತ್ತಲೆಯ ಕೋಣೆಯಲ್ಲಿ ಸ್ವಿಚ್ ಹಾಕಿ ಲೈಟು ಬೆಳಗಿಸಿ, ತಿಂಗಳುಗಳ ನಂತರ ಇನಿಯಳನ್ನು ನೋಡುವ ಉದ್ವೇಗದಲ್ಲಿ ಕೈ ಬೆರಳುಗಳಲ್ಲಿ ನಸು ಕಂಪನ.

ನಾಗಶ್ರೀ ಮಂಚದ ಮೇಲೆ ಚಟ್ಟೆಮುಟ್ಟೆ ಹಾಕಿ ಕೂತು ಮಗುವಿಗೆ ಹಾಲೂಡಿಸುತ್ತಿದ್ದಳು. ಗಂಡನ ಮುಖ ನೋಡುತ್ತಿದ್ದಂತೆ ಕಣ್ಣುಗಳು ಥಳಗುಟ್ಟಿದ್ದುವು.

ನೋಡಿ ಯುಗ ಆಯ್ತೇನೋ ಅನ್ನಿಸ್ತಿದೆ.. ಪಿಸುಗುಟ್ಟಿದ್ದ ರಾಮಚಂದ್ರ.

ತಲೇ ಮೇಲೆ ಕಡ್ಕಂಬಿತ್ತಲ್ಲ ಭಾರ? ನಿಮಗೆ ಪುರುಸೊತ್ತೆಲ್ಲಿರುತ್ತೆ?

